


ಎಡದಿಂದ ಬಲಕ್ಕೆ:
1. ವ್ಯಾಪಾರದ ಉದ್ದೇಶಗಳನ್ನು ಕುರಿತು ಬೋಧನೆ (4)
3. ಕವಿಯಂತಿರುವುದೇ ಆದರೂ ಅದು ಈಜು ರೆಕ್ಕೆ (3)
4. ತೋತಾಪುರಿ ಹಣ್ಣಿಗೆ ಯಾಕೋ ಬಹಳ ಅಭಾವ (3)
6. ಗಣಿ ತೋಡಿಸಲು ಹೋದಲ್ಲಿ ಎಂಥ ಸುಂದರ ಜಲಪಾತ ! (4)
7. ಗಿಡುಗನನ್ನು ತೋರಿಸು ; ಹೆದರಿ ಅದುರುವಂತೆ ಮಾಡು (4)
9. ಕುದಿಯುತ್ತಿರುವ ಈ ನೀರಿನ ಶಾಖ ಮೂಲ ಸೂರ್ಯ ತಾನೇ ? (4)
12. ದಂಪತಿಗಳ ಸೈನ್ಯಕ್ಕೂ ಇದ್ದಾನೆ ಒಬ್ಬ ಮುಖ್ಯಸ್ಥ (4)
14. ತಜ್ಞರಿಗೆ ಉಡುಗೊರೆ ಕೊಡಲು ಬೆಳ್ಳಿಯೇ ಸರಿ (3)
15. ಎಲ್ಲಕ್ಕೂ ಹಾನಿಯಾಗಲು ಕಾರಣ ಉಕ್ಕಿ ಹರಿದ ನದಿ (3)
16. 'ಲಘು'ವನ್ನು ಒತ್ತದಿರುವ ರೀತಿ ಬೇಗ ಬೇಗ (4)

ಮೇಲಿಂದ ಕೆಳಕ್ಕೆ :
1. ಊರಲ್ಲಿ ಯಾರೂ ಒಲ್ಲರು, ಈ ಇಂಧನ (4)
2. ದೋಷ ತೋರಿದ್ದನ್ನ ಸರಿಪಡಿಸಲು ಒಂದು ನೂರು ಹಗಲುರಾತ್ರಿ (4)
3. ಕವಡೆಗಳನ್ನು ಮಾರುತ್ತಿರುವವ ಶ್ರವಣ ಶಕ್ತಿ ಇಲ್ಲದವ (3)
5. ರಟ್ಟಲ್ಲಿ ಅಡಗಿಸಹೋಗಿ ತಲೆಕೆಳಗಾಯಿತು ತಂತೀ ವಾದ್ಯ (3)
6. ಹಳ್ಳ ತೆಗೆದು ನಿರ್ಮಿಸಿದ್ದು ಸುಭದ್ರ ಅಡಿಪಾಯ (4)
8. ಪಾರ್ಥಸಾರಥಿಯನ್ನು ಕಾಣಲು ಬಂದದ್ದು ದೇವತೆಗಳ ಒಡೆಯ (4)
10. ನಾರಿಯರಿಗೆ ಪರಮ ಪ್ರಿಯ ಇಂಥ ಭಾರೀ ಊರು (3)
11. ಸಾರು ತರಲು ಹೋದವ ತಲುಪಿದ್ದು ಒಂದು ಪಾತಾಳಲೋಕ (4)
12. ದಟ್ಟಡವಿಯಿಂದ ಹೊಮ್ಮುತ್ತಿದೆ ಹೇಗೆ ಇಷ್ಟು ಸಾಂದ್ರ ಧೂಮ ? (4)
13. ಪಾರಾಗಲು ಬಳಸಿದ್ದು ರಾತ್ರಿಯಲ್ಲದ ಸಮಯ (3)

## 27-7-2017ರ ಉತ್ತರಗಳು

ಎಡದಿಂದ ಬಲಕ್ಕೆ :
1.ಜಾಯಮಾನ 3. ಜವ್ವನ 4.ಗಾವಿಲ 6. ಕಿರುದಾರಿ 7. ಅನುನಯ 9. ಜಾಯಿಕಾಯಿ 11. ಕಲಾವಿದ 13. ನುಡಿಮುತ್ತು 15.ಗತಕಾಲ 17. ದಳ್ಳಾಳಿ 18. ಗುಣಕ 19. ಕೆಳೆತನ (=ಗೆಳೆತನ)
ಮೇಲಿಂದ ಕೆಳಕ್ಕೆ:
1. ಜಾನಕಿ 2. ನಗಾರಿ 3. ಜವಾನ 5. ಲಡಾಯಿ 7. ಅಣಕ 8. ಯಶೋದ 9. ಜಾಮೂನು 10. ಯಕೃತ್ತು 12. ವಿಷಾದ 14. ಡಿರಕ (=ಕರಡಿ ತಲೆಕೆಳಗು) 15.ಗಳಿಕೆ 16. ಲಗುನ (= ಲಗ್ನ)

---

## ಪ್ರಶ್ನಾಂಕಣ

### ಭೂ ನೆಲ ಬಳಕೆ: ಹೇಗೆ ಹೇಗೆ?

ಗೋಳಾಕಾರದ ನಮ್ಮ ಪೃಥ್ವಿಯ ಇಡೀ ಮೇಲ್ಮೈನ ಒಟ್ಟು ವಿಸ್ತಾರ ಸಮೀಪ 51 ಕೋಟಿ ಚದರ ಕಿಲೋ ಮೀಟರ್. ಇದರ ಶೇಕಡ 71 ಭಾಗ (ಎಂದರೆ 36ಕೋಟಿ, 11 ಲಕ್ಷ ಚದರ ಕಿ.ಮೀ ಪ್ರದೇಶ ) ಸಾಗರ ಮತ್ತಿತರ ಜಲಾವಾರ. ಉಳಿದ ಶೇಕಡ 29 ಭಾಗ ( ಎಂದರೆ 14 ಕೋಟಿ 89 ಲಕ್ಷ ಚದರ ಕಿ.ಮೀ ಪ್ರದೇಶ ) ಗಟ್ಟಿ ನೆಲ ( ಚಿತ್ರ 1 ರ ಭೂಪಟದಲ್ಲಿ ಗಮನಿಸಿ). ಈ ನೆಲ ಪ್ರದೇಶವೇ ನಮ್ಮನ್ನೂ ಸೇರಿಸಿದಂತೆ ಧರೆಯ ಜೀವಜಾಲದ ಸುಮಾರು 75% ರಷ್ಟು ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ನೆಲೆ . ಅಡವಿಗಳು, ಪರ್ವತಗಳು, ಬೆಟ್ಟ ಗುಡ್ಡ ದ್ವೀಪಗಳು, ಮರುಭೂಮಿ, ಬಂಜರು ನೆಲ, ಹುಲ್ಲುಬಯಲು, ಹಿಮಾಚ್ಛಾದಿತ ನೆಲ, ಅತಿ ಶೀತಲ ತಂಡ್ರಾ ಪ್ರದೇಶ... ಇತ್ಯಾದಿ ಎಲ್ಲವೂ ನೆಲದ ಭಾಗಗಳೇ ತಾನೇ ?



ಈ ವಿತರಣೆ ಸ್ಪಷ್ಟವಾಗಿ ಬೇಕೆಂದರೆ ಒಟ್ಟೂ ಭೂ ನೆಲದ 20% ಭಾಗ ಶಾಶ್ವತ ಹಿಮಾವೃತ. ಪರ್ವತ ಪ್ರದೇಶಗಳದು 20% ರಷ್ಟು ಭಾಗ ; ಶುಷ್ಕ ಭೂಮಿ ಮರುಭೂಮಿಗಳದು 20% ರಷ್ಟು ಪ್ರದೇಶ ; ಮಣ್ಣಿನ ಪದರವೇ ಇಲ್ಲದ ಬಂಜರು ನೆಲ ವಿಸ್ತಾರ 10%. ಉಳಿದ 30% ರಷ್ಟು ನೆಲ ಸಸ್ಯ ಪ್ರಶಸ್ತ, ಕೃಷಿ ಪ್ರಶಸ್ತ ಭೂ ಭಾಗ ; ನೈಸರ್ಗಿಕ ಅಡವಿ, ಹುಲ್ಲು ಬಯಲುಗಳು ದಟ್ಟೈಸಿರುವ ಫಲವತ್ತಾದ ನೆಲ ಪ್ರದೇಶ ಇದೇ.

ವಾಸ್ತವ ಏನೆಂದರೆ, ಸುಮಾರು 12 ಕೋಟಿ ಚದರ ಕಿ.ಮೀ ವಿಸ್ತಾರ ಇರುವ ಹಿಮ ರಹಿತ ನೆಲದ 53.5% ರಷ್ಟು ಪ್ರದೇಶವನ್ನು, ಎಂದರೆ 6.4 ಕೋಟಿ ಚದರ ಕಿ.ಮೀ ಭೂ ನೆಲವನ್ನು ಈ ವರೆಗೆ ಮಾನವರು ಆಕ್ರಮಿಸಿದ್ದಾಗಿದೆ ! ಹಾಗೆಂದರೆ ಮಾನವ ಹಸ್ತಕ್ಷೇಪ ನಡೆದಿಲ್ಲದ ನೆಲ ಪ್ರದೇಶ ಹಿಮಾವೃತವಾಗಿಲ್ಲದ ನೆಲದ ಅರ್ಧಕ್ಕಿಂತಲೂ ಕಡಿಮೆ ವಿಸ್ತಾರ ಎಂಬುದು ಸ್ಪಷ್ಟವಾಯಿತಲ್ಲ ? ಹಾಗೆ ಮನುಷ್ಯರ ಹಾವಳಿಗಳಿಗೆ ಇನ್ನೂ ಸಿಲುಕದೆ ನೈಸರ್ಗಿಕವಾಗಿಯೇ, ಮೂಲ ರೂಪಗಳಲ್ಲೇ ಉಳಿದಿರುವ ನೆಲ (ಚಿತ್ರ3 ) 5.6 ಕೋಟಿ ಚದರ ಕಿ.ಮೀ ಗಳಷ್ಟಿದೆ, ಅಷ್ಟೇ !

ಮನುಷ್ಯರು ಈ ವರೆಗೆ ಆಕ್ರಮಿಸಿ, ತಮ್ಮ ಅಗತ್ಯಗಳಿಗೆ ತಕ್ಕಂತೆ ರೂಪಾಂತರಿಸಿರುವ 6.4 ಕೋಟಿ ಚದರ ಕಿ.ಮೀ ನೆಲ ಪ್ರದೇಶದ 73% ಭಾಗ ಕೃಷಿ ಕೆಲಸಗಳಿಗೆಂದೇ ಬಳಕೆಯಾಗುತ್ತಿದೆ. 4.7 ಕೋಟಿ ಚದರ ಕಿ.ಮೀ ಗಳಷ್ಟಾಗುವ ಇಷ್ಟೂ ನೆಲದ 66% ಭಾಗ ( 3.1 ಕೋಟಿ ಚದರ ಕಿ.ಮೀ) ಪಶುಗಳ ಮತ್ತು ಇತರ ಆಹಾರ ಪ್ರಾಣಿಗಳ ಸಾಕಣೆಗೇ ಬಳಕೆಗೊಳ್ಳುತ್ತಿದೆ ; ಉಳಿದ 1.6 ಕೋಟಿ ಚದರ ಕಿ.ಮೀ ಜಮೀನನ್ನು ವ್ಯವಸಾಯಕ್ಕಾಗಿ, ಎಂದರೆ ಆಹಾರ ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಗಾಗಿ, ಬಳಸಲಾಗುತ್ತಿದೆ ( ಚಿತ್ರ2 ) ಮನುಷ್ಯರ ಹಿಡಿತದಲ್ಲಿರುವ ನೆಲದ 27% ಭಾಗ, ಎಂದರೆ 1.7 ಕೋಟಿ ಚದರ ಕಿ.ಮೀ ನೆಲ ಇತರ ವಿವಿಧ ಅವಶ್ಯಕತೆಗಳಿಗೆ ಉಪಯೋಗಗೊಳ್ಳುತ್ತಿದೆ : " ನಗರಗಳು, ಹಳ್ಳಿಗಳಲ್ಲಿ ಜನ ವಸತಿ, ಕೈಗಾರಿಕೆಗಳು ಮತ್ತು ವಾಣಿಜ್ಯ ಕಟ್ಟಡಗಳು, ನೆಡು ತೋಪುಗಳು, ಗಣಿಗಾರಿಕೆ, ರಸ್ತೆಗಳು ಮತ್ತು ರೈಲು ಮಾರ್ಗಗಳು, ಜಲಾಶಯಗಳು,..... ಇತ್ಯಾದಿ".

ಬಹುಮುಖ್ಯ ಅಂಶವೇನೆಂದರೆ ಮನುಷ್ಯರಿಗೆ ನೆಲದ ಅಗತ್ಯ ದಿನೇ ದಿನೇ ಏರುತ್ತಲಿದೆ. ಹಾಗಾಗಿ ಅಡವಿಗಳಿರುವಂತಹ ಅತ್ಯಂತ ಪ್ರಶಸ್ತ ಪ್ರದೇಶಗಳು ನೆಲಸಮಗೊಳ್ಳುತ್ತಿವೆ. ತತ್ಪರಿಣಾಮವಾಗಿ ಪಾರಿಸರಿಕ ಸಮಸ್ಯೆಗಳು ಉದ್ಭವಿಸುತ್ತ, ತೀವ್ರಗೊಳ್ಳುತ್ತ ಧರೆಯ ಇಡೀ ಜೀವಜಾಲವೇ ಸಂಕಷ್ಟದತ್ತ ನಡೆದಿದೆ.

■ ಎನ್. ವಾಸುದೇವ್